ನೀವು ಹೇಳಲಿಲ್ಲ.

ಶ್ರೀ ಎನ್.ಸುರೇಶ್ ಕುಮಾರ್: ಸಭಾಧ್ಯಕ್ಷರೆ, ಹಾಗಾದರೆ ನಾನು ವಿಧಾನಸೌಧದ ಮೇಲೆ ಕೇಸ್ ಹಾಕಿ ಮುಖ್ಯ ಕಾರ್ಯದರ್ಶಿಗಳನ್ನು ಪಾರ್ಟಿ ಮಾಡುವುದಿಲ್ಲ.

ಅಧ್ಯಕ್ಷರು: ಶ್ರೀನಿವಾಸ್‌ರವರೆ, ಇದನ್ನು ಬೇರೆ ರೂಪದಲ್ಲಿ ತೆಗೆದುಕೊಳ್ಳೋಣ, ಇದನ್ನು ಇಲ್ಲಿಗೆ ಬಿಡಿ.

(ಇ) ಗುತ್ತಿಗೆ ಶಿಕ್ಷಕರ ಸಂಬಳ ಕಡಿತವಾಗುತ್ತಿರುವ ಕುರಿತು.

+ ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಪ್ರಾಥಮಿಕ, ಪ್ರೌಢ ಪದವಿಪೂರ್ವ ಹಾಗೂ ಪದವಿ ಕಾಲೇಜುಗಳಿಗೆ ಸೇರಿದಂಥ ಶಿಕ್ಷಕರು ಇವತ್ತು ಬೃಹತ್ ರ್‍ಯಾಲಿ ಮಾಡಿ ಮತ್ತು ಮುಖ್ಯಮಂತ್ರಿಗಳ ಮನೆಯ ಮುಂದೆ ಧರಣಿ ಮಾಡುವುದೆಂದು ನಿಶ್ಚಯ ಮಾಡಿದ್ದಾರೆ; ಬಹುಶಃ ಇದು ಸರ್ಕಾರದ ಗಮನಕ್ಕೆ ಬಂದಿರಬಹುದೆಂದು ಭಾವಿಸುತ್ತೇನೆ. 1984ನೇ ಇಸವಿಯಲ್ಲಿ ಸರ್ಕಾರ ಪ್ರಾಥಮಿಕ, ಪ್ರೌಢ, ಪದವಿಪೂರ್ವ ಹಾಗೂ ಪದವಿ ಕಾಲೇಜುಗಳಿಗೆ ಸಂಬಂಧಪಟ್ಟ ಸುಮಾರು ಒಂಬತ್ತು ಸಾವಿರ ಶಿಕ್ಷಕರನ್ನು ಮೂಲವೇತನದಲ್ಲಿ ಗುತ್ತಿಗೆ ಆಧಾರದ ಮೇಲೆ ದುಡಿಸಿಕೊಂಡು ಬರುತ್ತಿದ್ದರು. ಹಲವಾರು ಸತ್ಯಾಗ್ರಹವನ್ನೆಲ್ಲಾ ಮಾಡಿ ಕೊನೆಗೆ 20-2-91ರಂದು ಸುಮಾರು ಒಂಬತ್ತು ಸಾವಿರಶಿಕ್ಷಕರ ಸೇವೆಯನ್ನು ಖಾಯಂ ಮಾಡಿ ಸರ್ಕಾರ ಆದೇಶವನ್ನು ಹೊರಡಿಸಿತು. ಆದರೆ ಅಂದು ಆದಂಥ ಒಡಂಬಡಿಕೆಯಲ್ಲಿ 1984 ರಿಂದ 1991ರವರೆಗೆ ವಾರ್ಷಿಕ ಬಡ್ತಿಯನ್ನು ನೀಡಿ ಅವರಿಗೆ ಸಂಬಳವನ್ನು ನಿಗಧಿಮಾಡಲಾಗಿತ್ತು. ಆದರೆ ಇಂದು ರಾಜ್ಯ ಸರ್ಕಾರ 12-6-1997ಕ್ಕೆ ವಿಶೇಷ ರಾಜ್ಯಪತ್ರ ಭಾಗ ನಂ.4 ಸೆಕ್ಷನ್ 2 ಸಿ 1ರ ಆಜ್ಞೆಯ ಪ್ರಕಾರ ಈ ಒಂದು 1984 ರಿಂದ 1991ರವರೆಗೆ ಕೊಟ್ಟಿರುವ ವಾರ್ಷಿಕ ಬಡ್ತಿಯನ್ನು ವಾಪಸ್ ತೆಗೆದುಕೊಳ್ಳಲು ಒಂದು ಆದೇಶ ಹೊರಡಿಸಿದೆ. ಇದು ಖಾಯಂಗೊಂಡ ಗುತ್ತಿಗೆ ಶಿಕ್ಷಕರಿಗೆ ದೊಡ್ಡ ತೊಂದರೆಯಾಗಿದೆ. ಇದರ ಪರಿಣಾಮವಾಗಿ ಪ್ರತಿಯೊಬ್ಬ ಶಿಕ್ಷಕನೂ ಕೂಡ ಇವತ್ತು ಸುಮಾರು ಐನೂರರಿಂದ ಸಾವಿರದ ನಾನೂರು ರೂಪಾಯಿಗಳವರೆಗೆ ತನ್ನ ಸಂಬಳದಲ್ಲಿ ಕಡಿತವನ್ನು ಎದುರಿಸುವಂಥ ವ್ಯವಸ್ಥೆಯಾಗಿದ್ದು, ಶಿಕ್ಷಕರು ಜೀವನ ನಡೆಸುವುದಕ್ಕೆ ತೊಂದರೆಯಾಗುವಂಥ ಸಂಗತಿಯಾಗಿದೆ. ಆದಕಾರಣ ನಾನು ಸರ್ಕಾರದವರಲ್ಲಿ ಕೇಳಿ ಕೊಳ್ಳುತ್ತಿದ್ದೇನೆ, ಇವತ್ತಿನ ಈ ಪರಿಸ್ಥಿತಿಯಲ್ಲಿ, ಸಂಬಳವನ್ನು ಜಾಸ್ತಿ ಮಾಡಬೇಕೆಂದು ಹೇಳುವಂಥ ಒಂದು ಪರಿಸ್ಥಿತಿ ಇರುವ ಸಂದರ್ಭದಲ್ಲಿ ಹಿಂದೆ ಏನು ಒಂದು ಒಡಂಬಡಿಕೆ ಆಗಿತ್ತು ಅದನ್ನು ಇವತ್ತು ರದ್ದು ಪಡಿಸಿ ತಕ್ಷಣ ಅವರಿಗೆ ಈ ತೊಂದರೆ ಮಾಡಿದ್ದು ದೊಡ್ಡ ಬೇಸರದ ಸಂಗತಿ, ಈ ಆದೇಶವನ್ನು ತಕ್ಷಣ ಸರ್ಕಾರ ಹಿಂದಕ್ಕೆ ತೆಗೆದುಕೊಳ್ಳಬೇಕು. ಇವತ್ತು ನಾಲ್ಕರಿಂದ ಐದು ಸಾವಿರದವರೆಗೆ ಶಿಕ್ಷಕರು ದೊಡ್ಡ ರ್‍ಯಾಲಿಯನ್ನು ನಡೆಸುತ್ತಿದ್ದಾರೆ, ಆ ರ್‍ಯಾಲಿಯಿಂದ ಸರ್ಕಾರದ ಕಣ್ಣುತೆರೆಸಬೇಕೆಂದು ಪ್ರಯತ್ನ ಪಟ್ಟಿದ್ದಾರೆ.

ಕಳೆದ ಎರಡು ತಿಂಗಳಿಂದ ಸತತವಾಗಿ ಅವರು ಸರ್ಕಾರಕ್ಕೆ ಪತ್ರ ಬರೆದರೂ ಕೂಡ ಈ ಸರ್ಕಾರ ಅದರ ಬಗ್ಗೆ ಯಾವುದೇ ಚಿಂತನೆಯನ್ನು ಮಾಡಿಲ್ಲ. ತಕ್ಷಣ ಈ ಆದೇಶವನ್ನು ಹಿಂತೆಗೆದುಕೊಳ್ಳಬೇಕು ಮತ್ತು 1984ರಿಂದ 1991ರವರೆಗೆ ಅವರಿಗೆ ಈ ಒಂದು ಬಡ್ತಿಯನ್ನು ಕೊಡುತ್ತೇವೆನ್ನುವ ವಿಚಾರವನ್ನು ಉಲ್ಲೇಖ ಮಾಡಿದ್ದೀರಿ, ಅದನ್ನು ಮತ್ತೆ ಮುಂದುವರೆಸುವುದಕ್ಕೆ ಈ ಆದೇಶವನ್ನು ರದ್ದು ಮಾಡಬೇಕೆಂದು ಸರ್ಕಾರವನ್ನು ಈ ಮೂಲಕ ಆಗ್ರಹಪಡಿಸುತ್ತಿದ್ದೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಸಭಾಧ್ಯಕ್ಷರೆ, 1984ರಿಂದ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಪದವಿಪೂರ್ವ ಕಾಲೇಜು ಹಾಗೂ ಪದವಿ ಕಾಲೇಜುಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಸುಮಾರು ಒಂಬತ್ತು ಸಾವಿರ ಶಿಕ್ಷಕರನ್ನು 1991ರಿಂದ ಖಾಯಂಗೊಳಿಸಿ ಅವರುಗಳಿಗೆ ಪೂರ್ವಾನ್ವಯವಾಗಿ ಬಡ್ತಿ ಮುಂತಾದ ಸೌಲಭ್ಯವನ್ನು ನೀಡಲಾಗಿತ್ತು. ಇಂಥದ್ದೇ ಸೌಲಭ್ಯವನ್ನು ನಮಗೂ ವಿಸ್ತರಿಸುವಂತೆ ನೀರಾವರಿ ಇಲಾಖೆಯ ಅರೆಕಾಲಿಕ ಇಂಜಿನಿಯರ್‌ಗಳು ನ್ಯಾಯಾಲಯಕ್ಕೆ ಹೋಗಿದ್ದು, ನ್ಯಾಯಾಲಯವು, ಸರ್ಕಾರ ಎಲ್ಲಾ ಇಲಾಖೆಯ ಅರೆಕಾಲಿಕ ನೌಕರರನ್ನು ಒಂದೇ ರೀತಿಯಲ್ಲಿ ಪರಿವರ್ತಿಸುವಂತೆ ಆದೇಶಿಸಿದೆ, ಈ ಹಿನ್ನೆಲೆಯಲ್ಲಿ ಸಿಆಸುಇ ಹಾಗೂ ಆರ್ಥಿಕ ಇಲಾಖೆಗಳು ಸರ್ಕಾರಕ್ಕೆ ಬೀಳುವ ಆರ್ಥಿಕ ಹೊರೆಯ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಗೆ ಮಾತ್ರ ನೀಡಿದ್ದ ಈ ಸೌಲಭ್ಯವನ್ನು ಹಿಂತೆಗೆದುಕೊಂಡು ಕರಡು ಆದೇಶವನ್ನು ಹೊರಡಿಸಿದೆ. ಈ ಬಗ್ಗೆ ಆಕ್ಷೇಪಣೆಯನ್ನು ಕೇಳಿದ್ದು, ಸಾಕಷ್ಟು ಆಕ್ಷೇಪಣೆಗಳು ಬಂದಿವೆ, ಇದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತರಲಾಗಿದ್ದು ಅವರೂ ಕೂಡ ಈ ಬಗ್ಗೆ ಸಂಬಂಧಿಸಿದ ಇಲಾಖೆಯವರೊಡನೆ ಸಮಾಲೋಚಿಸಿ ಅಂತಿಮ ತೀರ್ಮಾನವನ್ನು ಸದ್ಯದಲ್ಲೇ ತೆಗೆದುಕೊಳ್ಳಲಿದ್ದಾರೆ.

(ಈ) ಅಂತರ್ಜಾತಿ ವಿವಾಹವಾದವರಿಗೆ ಸರ್ಕಾರದ ಪ್ರೋತ್ಸಾಹ.

ಶ್ರೀ ಬಿ.ಮುನಿಯಪ್ಪ (ಗಾಂಧಿನಗರ): ಮಾನ್ಯ ಅಧ್ಯಕ್ಷರೆ, ಸರ್ಕಾರ ಅಂತರ್ಜಾತಿ ವಿವಾಹವಾದವರಿಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಅವರಿಗೆ ಧನಸಹಾಯ ಮಾಡುವಂಥ ಒಂದು ಯೋಜನೆ ಕರ್ನಾಟಕ ಸರ್ಕಾರದಲ್ಲಿದೆಯೇ ಎಂದು ಕೇಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಸಚಿವರು): ಸಭಾಧ್ಯಕ್ಷರೆ, ಇವರು ಈ ವಿಚಾರವನ್ನು ಈಗ ಎತ್ತಿದ್ದಾರೆ, ನಮಗೆ ಒಂದು ಕಾನೂನು ಇದೆ. ಅದರಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಬೇರೆ ಜಾತಿಯವರೊಡನೆ ವಿವಾಹವಾದ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಅವರಿಗೆ ಪ್ರೋತ್ಸಾಹ ಕೊಡುವುದಕ್ಕೆ ನಮ್ಮ ಕಾನೂನಿನಲ್ಲಿ ಅವಕಾಶವಿದೆ. ಬಹುಶಃ ಮಿಕ್ಕ ಜಾತಿಯವರು